## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 140 ಪಿಜಿಸಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 20-05-2016

### ಸುತ್ತೋಲೆ

**ವಿಷಯ:-** 1 ರಿಂದ 5ನೇ ತರಗತಿಗಳನ್ನು ಹೊಂದಿರುವ ಶಾಲೆಗಳಲ್ಲಿ 6 ರಿಂದ 8ನೇ ತರಗತಿಗಳನ್ನು ಪ್ರಾರಂಭಿಸಬೇಕಿದ್ದಲ್ಲಿ ಅಥವಾ 1 ರಿಂದ 8ನೇ ತರಗತಿಗಳನ್ನು ಹೊಂದಿದ್ದು 9 ಮತ್ತು 10ನೇ ತರಗತಿಗಳನ್ನು ಪ್ರಾರಂಭಿಸಲು ಸಂಸ್ಥೆಯು ಹೊಂದಬೇಕಾದ ಅಗತ್ಯ ಜಮೀನನ್ನು ನಿಗದಿಪಡಿಸುವ ಬಗ್ಗೆ.

**ಉಲ್ಲೇಖ:-** 1) ಸರ್ಕಾರದ ದಿ: 11-11-2014ರ ಅಧಿಸೂಚನೆ ಸಂಖ್ಯೆ ಇಡಿ 369 ಪಿಜಿಸಿ 2014.

2) ಸರ್ಕಾರದ ದಿ: 2-5-2015ರ ತಿದ್ದುಪಡಿ ಆದೇಶ ಸಂಖ್ಯೆ ಇಡಿ 369 ಪಿಜಿಸಿ 2014.

******

ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಸೆಕ್ಷನ್ 30 ಮತ್ತು 31 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗಿಕರಣ ಮತ್ತು ನೊಂದಣಿ) ನಿಯಮಗಳು, 1997ರ ನಿಯಮ 3 ರಡಿಯಲ್ಲಿ ಹೊರಡಿಸಲಾಗಿದ್ದ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 34 ವಿವಿಧ 2003 ದಿನಾಂಕ 26.05.2003 ಮತ್ತು ಇಡಿ 63 ಎಸ್ಇಎಸ್ 2004 ದಿನಾಂಕ 12.08.2005 ರಲ್ಲಿ ಹೊರಡಿಸಲಾಗಿದ್ದ ಆದೇಶದಲ್ಲಿನ ಹೊಸ ಶಾಲೆ ನೊಂದಣಿ ಸಂಬಂಧ ಆಡಳಿತ ಮಂಡಳಿಯು ಸಲ್ಲಿಸುವ ನೊಂದಣಿ ಶುಲ್ಕ, ಅರ್ಹ ನೊಂದಾಯಿತ ಆಡಳಿತ ಮಂಡಳಿಗಳು ವಿವಿಧ ಹಂತಗಳಲ್ಲಿ ಇಲಾಖೆಗೆ ಪ್ರಸ್ತಾವನೆಗಳನ್ನು ಸಲ್ಲಿಸುವ ದಿನಾಂಕವನ್ನು ಹಾಗೂ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ 2009ರ ಸೆಕ್ಷನ್ 19 & 25ರಲ್ಲಿ ಶಾಲೆಯು ಹೊಂದಿರಬೇಕಾದ ಜಮೀನು ಸೇರಿದಂತೆ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಉಲ್ಲೇಖ -1ರ ಅಧಿಸೂಚನೆಯಲ್ಲಿ ನಿಗದಿಪಡಿಸಲಾಗಿತ್ತು.

ಉಲ್ಲೇಖ-2ರ ತಿದ್ದುಪಡಿಯಲ್ಲಿ ಉಲ್ಲೇಖ-1ರ ಅಧಿಸೂಚನೆಯಲ್ಲಿನ ನಿಗದಿಪಡಿಸಿದ್ದ ಭೂಮಿಯ ವಿಸ್ತೀರ್ಣವನ್ನು ಮಾರ್ಪಡಿಸಿ 1 ರಿಂದ 8ನೇ ತರಗತಿಯವರೆಗೆ ಶಾಲೆ ಪ್ರಾರಂಭಿಸಲು ಗ್ರಾಮೀಣ ಪ್ರದೇಶದಲ್ಲಿ/ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ/ ಮಹಾನಗರ ಪಾಲಿಕೆಗಳ ವ್ಯಾಪ್ತಿಯ (ಬಿ.ಬಿ.ಎಂ.ಪಿ.ಯನ್ನು ಹೊರತುಪಡಿಸಿ) ಪ್ರದೇಶದಲ್ಲಿ ಕನಿಷ್ಟ ಒಂದು ಎಕರೆ ಪರಿವರ್ತಿತ ಭೂಮಿ, ಗ್ರಾಮ ಪಂಚಾಯಿತಿ ಇತ್ಯಾದಿ ಪ್ರಾಧಿಕಾರದಿಂದ ಶೈಕ್ಷಣಿಕ ಉದ್ದೇಶಗಳಿಗೆ ಲೈಸನ್ಸ್ ಮುಖಾಂತರ ಬಳಸಬಹುದಾದ ಕನಿಷ್ಟ ಒಂದು ಎಕರೆ ಭೂಮಿ ಸ್ವಂತ ಹೆಸರಿನಲ್ಲಿ ಇರಬೇಕು ಅಥವಾ 30 ವರ್ಷಗಳ ಲೀಸ್ ಅವಧಿಗೆ ಭೂಮಿಯು ಸಂಸ್ಥೆಯ ಹೆಸರಿನಲ್ಲಿರಬೇಕು ( 1 ರಿಂದ 10ನೇ ತರಗತಿಯವರೆಗೆ ಒಂದೇ ಆವರಣದಲ್ಲಿ ಶಾಲೆ ಪ್ರಾರಂಭಿಸಲು ಒಂದು ಎಕರೆ ಹೊಂದಿರಬೇಕು. ಪ್ರತ್ಯೇಕವಾಗಿ 9 ಮತ್ತು 10ನೇ ತರಗತಿಯ ಪ್ರೌಢ ಶಾಲೆ ಪ್ರಾರಂಭಿಸಲು ಸಹ 1 ಎಕರೆ ಭೂಮಿ ಇರಬೇಕು) ಬಿ.ಬಿ.ಎಂ.ಪಿ. ಪ್ರದೇಶಗಳಲ್ಲಿ 1 ರಿಂದ 8ನೇ ತರಗತಿ ಶಾಲೆಗಳಿಗೆ ಕನಿಷ್ಟ ಅರ್ಧ ಎಕರೆ ಭೂಮಿ ಸ್ವಂತ ಹೆಸರಿನಲ್ಲಿ ಇರಬೇಕು ಅಥವಾ 30 ವರ್ಷಗಳ ಲೀಸ್ ಅವಧಿಗೆ ಸಂಸ್ಥೆಯ ಹೆಸರಿನಲ್ಲಿರಬೇಕು. 1 ರಿಂದ 8ನೇ ತರಗತಿಯ ಜೊತೆಗೆ 9 ಮತ್ತು 10ನೇ ತರಗತಿಗಳನ್ನು ಹೊಂದಲು ಇಚ್ಚಿಸುವ ಶಾಲೆಗಳು ಒಂದು ಎಕರೆ ಕನಿಷ್ಟ ಭೂಮಿ ಸ್ವಂತ ಹೆಸರಿನಲ್ಲಿರಬೇಕು ಹಾಗೂ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 9 ಮತ್ತು 10ನೇ ತರಗತಿಗಳನ್ನು ಪ್ರತ್ಯೇಕವಾಗಿ ತೆರೆಯಲು ಅರ್ಧ ಎಕರೆ ಕನಿಷ್ಟ ಭೂಮಿ ಸ್ವಂತ ಹೆಸರಿನಲ್ಲಿ ಅಥವಾ 30 ವರ್ಷಗಳ ಲೀಸ್ ಅವಧಿಗೆ ಸಂಸ್ಥೆಯ ಹೆಸರಿನಲ್ಲಿರಬೇಕು ಎಂದು ನಿಗದಿಪಡಿಸಿದೆ.

ಈಗಾಗಲೇ ಅಸ್ತಿತ್ವದಲ್ಲಿರುವ ಶಾಲೆಗಳು ಉನ್ನತ ತರಗತಿಗಳನ್ನು ಪ್ರಾರಂಭಿಸಬೇಕಿದ್ದಲ್ಲಿ (1 ರಿಂದ ರಿಂದ 5ನೇ ತರಗತಿಗಳನ್ನು ಹೊಂದಿರುವ ಶಾಲೆಗಳಲ್ಲಿ 6 ರಿಂದ 8ನೇ ತರಗತಿಗಳನ್ನು ಪ್ರಾರಂಭಿಸಬೇಕಿದ್ದಲ್ಲಿ ಅಥವಾ 1 ರಿಂದ 8ನೇ ತರಗತಿಗಳನ್ನು ಹೊಂದಿದ್ದು 9 ಮತ್ತು 10ನೇ ತರಗತಿಗಳನ್ನು ಪ್ರಾರಂಭಿಸಬೇಕಿದ್ದಲ್ಲಿ) ಉಲ್ಲೇಖ -2ರ ತಿದ್ದುಪಡಿಯಲ್ಲಿ ನಿರ್ದಿಷ್ಟಪಡಿಸಿರುವ ಒಂದು ಅಥವಾ ಅರ್ಧ ಎಕರೆ ಭೂಮಿಯ ಅಗತ್ಯತೆಯನ್ನು ಪರಿಗಣಿಸಬೇಕಿಲ್ಲ. ಆದಾಗ್ಯೂ ಸಹ ಇಂತಹ ಶಾಲೆಗಳು ಉನ್ನತ ತರಗತಿಗಳನ್ನು ನಡೆಸಲು ಅಗತ್ಯವಿರುವ ಸಾಕಷ್ಟು ಹೆಚ್ಚುವರಿ ತರಗತಿ ಕೋಣೆಗಳು, ಪ್ರಯೋಗಾಲಯ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಇತ್ಯಾದಿಗಳನ್ನು ನಿರ್ಮಿಸಿದರೆ ಮಾತ್ರ ಅನುಮತಿ ನೀಡಬಹುದು. ಅಂತಹ ಯಾವುದೇ ಶಾಲೆಯು ಸ್ಥಳ ಬದಲಾವಣೆ ಕೋರಿದರೆ ಅಂತಹ ಸಂದರ್ಭಗಳಲ್ಲಿ ಉಲ್ಲೇಖ -1 ಮತ್ತು 2ರ ಅಧಿಸೂಚನೆ ಮತ್ತು ತಿದ್ದುಪಡಿಯಲ್ಲಿನ ಷರತ್ತುಗಳನ್ನು ಪೂರೈಸುವುದು ಕಡ್ಡಾಯವಾಗಿದೆ.

20/5/16
(ಹೆಚ್.ಎಸ್.ಹೊನ್ನೇಗೌಡ)
ಸರ್ಕಾರದಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ)

20/5/16

ಸಂಕಲನಕಾರರು, ಕರ್ನಾಟಕ ರಾಜ್ಯ ವಿಶೇಷ ಪತ್ರ, ಬೆಂಗಳೂರು – ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ವಿಶೇಷ ಪತ್ರದಲ್ಲಿ ಪ್ರಕಟಿಸಿ, ಪ್ರಕಟಿತ 500 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.

ಇವರಿಗೆ :

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ
3. ನಿರ್ದೇಶಕರು, ಪ್ರಾಥಮಿಕ/ಪ್ರೌಢ/ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಕಲಬುರಗಿ
4. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು,
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ)/ ಉಪನಿರ್ದೇಶಕರು (ಅಭಿವೃದ್ಧಿ)/ಕ್ಷೇತ್ರ ಶಿಕ್ಷಣಾಧಿಕಾರಿಗಳು/ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು – ಸಂಬಂಧಿಸಿದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ

ಪ್ರತಿಗಳು :-

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು,
3. ಸರ್ಕಾರದ ಜಂಟಿ/ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು